**OS.No.**16/2022
**<u>ಪಿ ಡಬ್ಲ್ಯೂ : 1</u>**

**<u>ದಿಃ 13.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದ</u>**

ನನ್ನ ತಂದೆಯವರಿಗೆ ಒಟ್ಟು ಮೂರು ಜನ ಹೆಣ್ಣು ಮಕ್ಕಳು ಅವರೆಂದರೆ ವಾದಿಯರು ಮತ್ತು 7 ನೇಪ್ರತಿವಾದಿ ಎಂದರೆ ಸರಿ. 7 ನೇ ಪ್ರತಿವಾದಿಯ ಮದುವೆಯಾಗಿ ಸುಮಾರು 50 ವರ್ಷ ಮೇಲ್ಪಟ್ಟು ಆಗಿರುತ್ತದೆ. ಅವರು ಮದುವೆಯಾದ ದಿನದಿಂದ ಅವರ ಗಂಡನ ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. 1 ನೇ ವಾದಿಯ ಮದುವೆಯಾಗಿ ಸುಮಾರು 20 ವರ್ಷ ಮೇಲ್ಪಟ್ಟು ಆಗಿರಬಹುದು. ನನ್ನ ಮದುವೆ 1986 ರಲ್ಲಿ ಆಗಿರುತ್ತದೆ. ನಾನು ಮತ್ತು 1 ನೇ ವಾದಿ ಮದುವೆಯಾದ ದಿನದಿಂದ ನಮ್ಮ ನಮ್ಮ ಗಂಡನ ಮನೆಯಲ್ಲಿ ವಾಸವಿರುತ್ತೇವೆ ಎಂದರೆ ಸರಿ. ನನ್ನ ತಂದೆ ಅವರ ತಂದೆಗೆ ಒಬ್ಬರೇ ಮಗ. ನನ್ನ ಅಜ್ಜನಿಗೆ ಏನೆಲ್ಲಾ ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿರುತ್ತದೆ. ನಾನು ನನ್ನ ಅಜ್ಜನ ಹೆಸರಿನಲ್ಲಿ ಇರುವ ಆಸ್ತಿಗಳ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ನನ್ನ ಅಜ್ಜನ ಹೆಸರಿಗೆ ಇರುವ ದಾಖಲೆಗಳು ಇಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಜೀವಂತ ಇದ್ದಾಗ ಕುಟುಂಬದ ಯಜಮಾನಿಕೆಯನ್ನು ಅವರೇ ಮಾಡುತ್ತಿದ್ದರು. ನನ್ನ ಅಜ್ಜನ ಕಡೆಯಿಂದ ಬಂದ ಆಸ್ತಿಗಳ ಸರ್ವೆ ನಂಬರ್ ಮತ್ತು ನನ್ನ ತಂದೆಯವರು ಮಾಡಿದ ಆಸ್ತಿಗಳ ಸರ್ವೆ ನಂಬರ್ ಗಳನ್ನು ಹೇಳಲು ಆಗುವುದಿಲ್ಲ. 5 ನೇ ಪ್ರತಿವಾದಿ ಏನು ತಕರಾರು ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ನಮ್ಮ ವಕೀಲರ ಕಡೆಯಿಂದಲೂ ಸಹ ಕೇಳಿ ತಿಳಿದುಕೊಂಡಿಲ್ಲ. 5 ನೇ ಪ್ರತಿವಾದಿ ಎಲ್ಲಿ ವಾಸವಿರುತ್ತಾರೆ ಎಂದು ಗೊತ್ತಿಲ್ಲ. ನಲ್ಲೂರಿನಲ್ಲಿ ವಾಸವಿರಬಹುದು. ನಲ್ಲೂರಿನಲ್ಲಿ ಸುಮಾರು 4-5 ವರ್ಷಗಳಿಂದ ವಾಸವಿರಬಹುದು. ಅದಕ್ಕಿಂತ ಮೊದಲು ಮಲ್ಲಿಗೇನಹಳ್ಳಿಯಲ್ಲಿ ಬೇರೆಯಾಗಿ ವಾಸವಿದ್ದರು ಎಂದರೆ ಸರಿ. 5 ನೇ ಪ್ರತಿವಾದಿ ನನ್ನ ತಂದೆ ಜೀವಂತ ಇದ್ದಾಗಲೇ 1987 ರಿಂದ ಬೇರೆ ವಾಸವಿದ್ದರು ಎಂದರೆ ಸಾಕ್ಷಿಯು ಎಲ್ಲರೂ ಬೇರೆಯಾಗಿಯೇ ವಾಸವಿದ್ದರು ಎಂದು ನುಡಿಯುತ್ತಾರೆ. 5 ನೇ ಪ್ರತಿವಾದಿ ನಮ್ಮ ಅಜ್ಜ ಕಟ್ಟಿಸಿದ ಒಂದು ಬೇರೆ ಮನೆಯಲ್ಲಿ ವಾಸವಿದ್ದರು. 2 ರಿಂದ 4 ನೇ ಪ್ರತಿವಾದಿಯರು ಸಹ ಪ್ರತ್ಯೇಕವಾಗಿ ವಾಸವಿದ್ದರು. ನನ್ನ ತಂದೆ ಜೀವಂತ ಇದ್ದಾಗ 5 ನೇ ಪ್ರತಿವಾದಿಯ ಜೊತೆ ವಾಸವಿದ್ದರು ಎಂದರೆ ಸಾಕ್ಷಿಯು ಎಲ್ಲರ ಜೊತೆ ವಾಸವಿದ್ದರು ಎಂದು ನುಡಿಯುತ್ತಾರೆ. 1987 ರಿಂದ ಬೇರೆ ಬೇರೆ ವಾಸವಿರುವಾಗ ಅವರವರ ಮನೆತನದ ವ್ಯವಹಾರವನ್ನು ಅವರವರೇ ಪ್ರತ್ಯೇಕವಾಗಿ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. 1987 ರಿಂದ ಇಲ್ಲಿಯವರೆಗೆ ನನ್ನ ತಂದೆ ಮತ್ತು ಗಂಡು ಮಕ್ಕಳ ನಡುವೆ ಒಟ್ಟು ಕುಟುಂಬದ ವ್ಯವಸ್ಥೆ ಇಲ್ಲ ಎಂದರೆ ಸರಿ. ಪ್ರತ್ಯೇಕವಾಗಿ ವಾಸವಿರುವಾಗ 2 ರಿಂದ 5 ನೇ ಪ್ರತಿವಾದಿಯರು ಯಾವ ಸರ್ವೆ ನಂಬರ್ ಗಳ ಸ್ವಾಧೀನದಲ್ಲಿ ಇದ್ದರು ಎಂದು ನನಗೆ ಗೊತ್ತಿಲ್ಲ. ದಿನಾಂಕ 16.01.1987 ರಲ್ಲಿ ನನ್ನ ತಂದೆ ಮತ್ತು 5 ನೇಪ್ರತಿವಾದಿಯ ನಡುವೆ ನೋಂದಾಯಿತ ಪಾಲು ವಿಭಾಗ ಪತ್ರ ಆದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಪಾಲು ವಿಭಾಗ ಪತ್ರದ ಮೇರೆಗೆ ನನ್ನ ತಂದೆಯವರು ದಾವಾ ಅನುಸೂಚಿ 7 ಆಸ್ತಿಯನ್ನು 5 ನೇ ಪ್ರತಿವಾದಿಗೆ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ದಾವೆಯನ್ನು ಹಾಕುವ

ಕಾಲಕ್ಕೆ ಸದರಿ ಆಸ್ತಿಯು ಯಾರ ಹೆಸನರಿಲ್ಲಿ ಖಾತೆಯಾಗಿತ್ತು ಎಂದು ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿದ ನಿಪಿ.7 ರಲ್ಲಿ ದೇವಮ್ಮ ಕೋಂ ಕರಿಬಸಯ್ಯ ಎಂದು ಇದ್ದು ಸದರಿಯವರು ನನ್ನ ತಮ್ಮನ ಹೆಂಡತಿ ಇರುತ್ತಾರೆ. ಸದರಿ ಆಸ್ತಿಯು ದೇವಮ್ಮನ ಹೆಸರಿಗೆ ಯಾವ ಆಧಾರದ ಮೇರೆಗೆ ಖಾತೆಯಾಗಿರುತ್ತದೆ ಎಂದು ನಾನು ಕೇಳಿ ತಿಳಿದುಕೊಂಡಿಲ್ಲ. ನಿಪಿ.7 ರಲ್ಲಿ ಸದರಿ ಆಸ್ತಿಯು ದೇವಮ್ಮನಿಗೆ ನೋಂದಾಯಿತ ದಾನಪತ್ರದ ಮೂಲಕ ಬಂದಿರುತ್ತದೆ ಎಂದು ಬರೆದ ಬಗ್ಗೆ ನನಗೆ ಗೊತ್ತಿಲ್ಲ.

ನಿಪಿ.11 5 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಮತ್ತು ಪಹಣಿ ಆದ ಬಗ್ಗೆ ನನಗೆ ಗೊತ್ತಿಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. 5 ಮತ್ತು 6 ನೇ ಪ್ರತಿವಾದಿಯರ ಹೆಸರಿಗೆ ಖಾತೆಯಾದ ಬಗ್ಗೆ ನಾನು ಮ್ಯುಟೇಶನ್‌ಗಳನ್ನು ಹಾಜರುಪಡಿಸಿದ್ದೇನೋ ಇಲ್ಲವೋ ಗೊತ್ತಿಲ್ಲ. 5 ನೇ ಪ್ರತಿವಾದಿ ತಕರಾರು ಹಾಕಿದ್ದಾರೋ ಇಲ್ಲವೋ ಎಂದು ಕೇಳಿ ತಿಳಿದುಕೊಂಡಿಲ್ಲ. ದಾವಾದ ಆಸ್ತಿಗಳಲ್ಲಿ ಯಾವ ಆಸ್ತಿಗಳಲ್ಲಿ ಯಾರು ಸ್ವಾಧೀನದಲ್ಲಿ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. 1987 ರಲ್ಲಿ ಆದ ವಿಭಾಗ ಪತ್ರದಲ್ಲಿ ದಾವಾ ಅನುಸೂಚಿ 7 ಆಸ್ತಿಯನ್ನು ನನ್ನ ತಂದೆಯವರು 5 ನೇ ಪ್ರತಿವಾದಿಗೆ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ನೋಂದಾಯಿತ ವಿಭಾಗ ಪತ್ರ ಆಗುವ ಕಾಲಕ್ಕೆ ನನ್ನ ತಂದೆಯವರು 5 ನೇ ಪ್ರತಿವಾದಿಗೆ ದಾವಾ ಅನುಸೂಚಿ 2 ರಲ್ಲಿರುವ 2 ಎಕರೆ ಪೈಕಿ 1 ಎಕರೆ ಆಸ್ತಿಯನ್ನು ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಎರಡು ಆಸ್ತಿಗಳನ್ನು 5 ನೇ ಪ್ರತಿವಾದಿ ಅನುಬೋಗದಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಅವರೆಲ್ಲರೂ ಎಲ್ಲಾ ಆಸ್ತಿಗಳಲ್ಲಿ ಅವರವರ ಪಾಲಿನಲ್ಲಿ ಅನುಬೋಗದಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ 2 ಆಸ್ತಿಯು ನನ್ನ ತಂದೆಯವರಿಗೆ ದರ್ಕಾಸ್ತು ಮೂಲಕ ಮಂಜೂರಾದ ಆಸ್ತಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯು ಪಕ್ಕಾ ಪೋಡು ಆಗದ ಕಾರಣ ಆ ಆಸ್ತಿಯನ್ನು ನೋಂದಾಯಿತ ಪಾಲು ವಿಭಾಗದಲ್ಲಿ ಸೇರಿಸದೇ ಕೇವಲ 1 ಎಕರೆ ಸ್ವಾಧೀನವನ್ನು 5 ನೇಪ್ರತಿವಾದಿಗೆ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ.

ನಾನು ದಾವಾ ಅನುಸೂಚಿ 4 ಆಸ್ತಿಯನ್ನು ನೋಡಿದ್ದೇನೆ. ಅದರ ಚೆಕ್ ಬಂದಿ ನನಗೆ ಗೊತ್ತಿಲ್ಲ. ಸದರಿ ಆಸ್ತಿಯು ಮೂಲತಃ ಮಲ್ಲಿಗೇನಹಳ್ಳಿ ಸರೋಜಮ್ಮ ಕೋಂ ಅಡಿವೆಪ್ಪರವರ ಆಸ್ತಿ ಎಂದರೆ ಸರಿಯಲ್ಲ. ದಿನಾಂಕ 18.03.2009 ರಂದು ಸದರಿ ಆಸ್ತಿಯನ್ನು 5 ನೇಪ್ರತಿವಾದಿಯು ನನ್ನ ತಂದೆಯವರ ಹೆಸರಿಗೆ ಖರೀದಿಸಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯವರು 5 ನೇ ಪ್ರತಿವಾದಿಯ ಜೊತೆ ವಾಸವಿದ್ದುದ್ದರಿಂದ 5 ನೇ ಪ್ರತಿವಾದಿಯು ತಮ್ಮ ಹಣದಲ್ಲಿ ನನ್ನ ತಂದೆಯ ಹೆಸರಿಗೆ ಸದರಿ ಆಸ್ತಿಯನ್ನು ಖರೀದಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ 5 ನೇ ಪ್ರತಿವಾದಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಎಲ್ಲರೂ ಅವರವರ ಪಾಲಿನ ಆಸ್ತಿಯನ್ನು ಹೊಡೆಯುತ್ತಿದ್ದಾರೆ ಆದರೆ ಯಾವುದೇ ಪಾಲು ವಿಭಾಗ ಆಗಿಲ್ಲ ಎಂದು ನುಡಿಯುತ್ತಾರೆ. ಅವರವರ ಪಾಲಿನ ಆಸ್ತಿಯನ್ನು ಹೊಡೆಯುವ ಬಗ್ಗೆ ವಿಭಾಗವಾಗಿ ಸುಮಾರು 30 ವರ್ಷ ಮೇಲ್ಪಟ್ಟು ಆಗಿರಬಹುದು. ಸದರಿ ಆಸ್ತಿಯು ದಾನಪತ್ರದ ಮೂಲಕ 5 ನೇ ಪ್ರತಿವಾದಿಗೆ ಬಂದ ಬಗ್ಗೆ ನಿಪಿ.9 ರಂತೆ ದಾಖಲೆ ಹಾಜರುಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿ ನನ್ನ ತಂದೆಯ ಹೆಸರಿಗೆ ಸದರಿ ಆಸ್ತಿಯನ್ನು ಖರೀದಿಸಿದ್ದರಿಂದ ನನ್ನ ತಂದೆಯವರು ದಿನಾಂಕ 13.03.2020 ರಲ್ಲಿ ಅವರಿಗೆ

ದಾನಪತ್ರ ಮಾಡಿಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ವಿನಂತಿಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.